# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1887 (2250)
2. ಸದಸ್ಯರ ಹೆಸರು : ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 31-03-2020 (ಸದನವನ್ನು ಮುಂದೂಡಲಾಗಿದೆ)
4. ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಚಾಮರಾಜನಗರದ ಒಳಚರಂಡಿ ಯೋಜನೆ ಕಾಮಗಾರಿಗಳು ಪೂರ್ಣಗೊಂಡಿವೆಯೇ; ಪ್ರತಿ ಮನೆಗಳಿಗೆ ಒಳಚರಂಡಿ ಯೋಜನೆಯ ಸಂಪರ್ಕ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು; ಪ್ರತಿ ಮನೆಗೆ ಒಳಚರಂಡಿ ಸಂಪರ್ಕ ಕಲ್ಪಿಸುವ ಮೂಲಕ ತೆರೆದ ಚರಂಡಿಯ ಮೂಲಕ ಹರಿಯುತ್ತಿರುವ ಕಲುಷಿತ ನೀರಿನ ಹರಿವನ್ನು ತಪ್ಪಿಸಲಾಗುವುದೇ; | **ಕೆ.ಯು.ಐ.ಡಿ.ಎಫ್.ಸಿ ಉತ್ತರ:** ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿಯಲ್ಲಿ (ಎನ್‌ಕೆಯುಎಸ್‌ಐಪಿ) ಚಾಮರಾಜನಗರದಲ್ಲಿ ಒಳಚರಂಡಿ ವ್ಯವಸ್ಥೆಯ ಕಾಮಗಾರಿ ದಿನಾಂಕ:31/12/2018 ರಂದು ಪೂರ್ಣಗೊಂಡಿದೆ. ಮನೆ ಸಂಪರ್ಕ ಕಲ್ಪಿಸುವುದು ಈ ಯೋಜನೆ ವ್ಯಾಪ್ತಿಯಲ್ಲಿರುವುದಿಲ್ಲ.<br><br>ಪ್ರತಿ ಮನೆ ಸಂಪರ್ಕವನ್ನು ಕಲ್ಪಿಸಲು ನಗರಸಭೆ ಚಾಮರಾಜನಗರ ರವರು ಕ್ರಮ ಕೈಗೊಂಡಿರುತ್ತಾರೆ. ಹಾಗೂ ಈ ಕೆಲಸ ಪ್ರಗತಿಯಲ್ಲಿದೆ.<br><br>ಚಾಮರಾಜನಗರದ ಎಲ್ಲಾ ಬಳಕೆದಾರರು ಒಳಚರಂಡಿ ಸಂಪರ್ಕವನ್ನು ಪಡೆದ ನಂತರ ತೆರೆದ ಚರಂಡಿಯಲ್ಲಿ ಹರಿಯುತ್ತಿರುವ ಕಲುಷಿತ ನೀರು ತಪ್ಪಿಸಬಹುದಾಗಿದೆ.<br><br>**ಡಿ.ಎಂ.ಎ ಉತ್ತರ:** ಚಾಮರಾಜನಗರದ ಒಳಚರಂಡಿ ಯೋಜನೆಯ ಮೊದಲನೇ ಹಂತದ ಕಾಮಗಾರಿ ಪೂರ್ಣಗೊಂಡಿರುತ್ತವೆ.<br>ಚಾಮರಾಜನಗರ ಪಟ್ಟಣದಲ್ಲಿ 16191 ಮನೆಗಳಿದ್ದು, ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯವರಿಂದ ಅರಿವು ಮೂಡಿಸಿ, ಇದುವರೆವಿಗೂ ಸುಮಾರು 6300 ಮನೆಗಳಿಗೆ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ. ಉಳಿಕೆ ಮನೆಗಳ ಸಂಪರ್ಕಗಳು ಪ್ರಗತಿಯಲ್ಲಿರುತ್ತದೆ.<br><br>ಒಂದು ಸಂಪರ್ಕಕ್ಕೆ ಸುಮಾರು ರೂ.5,000.00 ಗಳಿಂದ ರೂ.15000.00 ವರೆಗೆ ವೆಚ್ಚವಾಗುವುದು. ಸದರಿ ವೆಚ್ಚವನ್ನು ಸಂಬಂಧಿಸಿದ ಮನೆ ಮಾಲೀಕರೇ ಭರಿಸಬೇಕಾಗಿರುವುದರಿಂದ, ಪೂರ್ಣ ಪ್ರಮಾಣದಲ್ಲಿ ಮನೆಗಳಿಗೆ ಒಳಚರಂಡಿ ಸಂಪರ್ಕಗಳನ್ನು ಕಲ್ಪಿಸಲು ವಿಳಂಬವಾಗಿರುತ್ತದೆ.<br><br>ಬಾಕಿ ಇರುವ ಎಲ್ಲಾ ಮನೆಗಳಿಗೆ ಒಳಚರಂಡಿ ಸಂಪರ್ಕ ಕಲ್ಪಿಸುವ ಕಾಮಗಾರಿಯು ಪೂರ್ಣಗೊಂಡಲ್ಲಿ ತೆರದ ಚರಂಡಿಯ ಮೂಲಕ ಹರಿಯುತ್ತಿರುವ ಕಲುಷಿತ ನೀರನ್ನು ಸಂಪೂರ್ಣವಾಗಿ ತಡೆಯಲಾಗುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಚಾಮರಾಜನಗರ ಒಳಚರಂಡಿ ಕಾಮಗಾರಿಗಳಗೆ ಇನ್ನೂ 50 ಕೋಟಿ ರೂ.ಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ: ಈ ಪ್ರಸ್ತಾವನೆಗೆ ಅನುಮೋದನೆ ನೀಡುವ ಮೂಲಕ ಚಾಮರಾಜನಗರದ ಒಳಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದೇ? | ಚಾಮರಾಜನಗರ ಒಳಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದ ರೂ.50.00 ಕೋಟಿಗಳ ಯಾವುದೇ ಪ್ರಸ್ತಾವನೆಯು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಲ್ಲಿ ನಂತರ ನಿಯಮಾನುಸಾರ ಪರಿಶೀಲಿಸಿ. ಕ್ರಮವಹಿಸಲಾಗುವುದು. |

ಕಡತ ಸಂಖ್ಯೆ: ನಅಇ 258 ಪಿ.ಆರ್.ಜೆ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.